# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 641(723)

ಸದಸ್ಯರ ಹೆಸರು : ಶ್ರೀ ಯು.ಬಿ.ವೆಂಕಟೇಶ್
(ನಾಮನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 26.12.2022

ಉತ್ತರಿಸುವ ಸಚಿವರು : ಗೃಹ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೆಂಗಳೂರು ನಗರದ ವಿವಿಧ ಆರಕ್ಷಕ ಠಾಣೆಗಳಲ್ಲಿರುವ ರೌಡಿ ಪಟ್ಟಿಯಲ್ಲಿರುವವರ ಸಂಖ್ಯೆ ಎಷ್ಟು,</td><td>ಬೆಂಗಳೂರು ನಗರದ ಪೊಲೀಸ್ ಠಾಣೆಗಳಲ್ಲಿ ಒಟ್ಟು ಸಂಖ್ಯೆ:7526 ಅಸಾಮಿಗಳು ರೌಡಿ ಪಟ್ಟಿಯಲ್ಲಿರುತ್ತಾರೆ.</td></tr>
<tr><td>ಆ</td><td>ಕಳೆದ ಮೂರು ವರ್ಷಗಳಿಂದ ಎಷ್ಟು ಮಂದಿ ರೌಡಿಗಳನ್ನು ರೌಡಿ ಪಟ್ಟಿಯಿಂದ ಕೈಬಿಡಲಾಗಿದೆ. (ವಿವರವಾದ ವರದಿಯನ್ನು ನೀಡುವುದು)</td><td>ಕಳೆದ ಮೂರು ವರ್ಷಗಳಿಂದ ರೌಡಿ ಪಟ್ಟಿಯಿಂದ ಕೈಬಿಡಲಾದ ರೌಡಿಗಳ ಬಗ್ಗೆ ಅಂಕಿ ಅಂಶಗಳ ಮಾಹಿತಿಯು ಈ ಕೆಳಕಂಡಂತಿದೆ.<br><br>
<table>
<tr><th rowspan="2">ವಿಭಾಗಗಳು</th><th colspan="3">ರೌಡಿ ಪಟ್ಟಿಯಿಂದ ಕೈಬಿಡಲಾದ ರೌಡಿಗಳ ವರ್ಷವಾರು ಅಂಕಿ-ಅಂಶಗಳ ವಿವರ</th></tr>
<tr><th>2020</th><th>2021</th><th>2022</th></tr>
<tr><td>ಕೇಂದ್ರ</td><td>19</td><td>81</td><td>11</td></tr>
<tr><td>ಪಶ್ಚಿಮ</td><td>40</td><td>9</td><td>25</td></tr>
<tr><td>ಉತ್ತರ</td><td>27</td><td>4</td><td>15</td></tr>
<tr><td>ದಕ್ಷಿಣ</td><td>52</td><td>28</td><td>9</td></tr>
<tr><td>ಪೂರ್ವ</td><td>68</td><td>21</td><td>24</td></tr>
<tr><td>ಈಶಾನ್ಯ</td><td>97</td><td>35</td><td>161</td></tr>
<tr><td>ಆಗ್ನೇಯ</td><td>15</td><td>6</td><td>18</td></tr>
<tr><td>ವೈಟ್‌ಫೀಲ್ಡ್</td><td>16</td><td>4</td><td>3</td></tr>
<tr><td>ಒಟ್ಟು</td><td>334</td><td>188</td><td>266</td></tr>
</table></td></tr>
</table>

...2

| | | |
|---|---|---|
| ಇ. | ರೌಡಿ ಪಟ್ಟಿಯಿಂದ ರೌಡಿಗಳ ಹೆಸರನ್ನು ಕೈಬಿಡಲು ಸರ್ಕಾರವು ಅನುಸರಿಸುವ ಮಾನದಂಡವೇನು? | ರೌಡಿ ಪಟ್ಟಿಯಿಂದ ರೌಡಿಗಳ ಹೆಸರನ್ನು ಕೈಬಿಡಲು ಠಾಣಾಧಿಕಾರಿಯವರ ವರದಿಯ ಮೇರೆಗೆ ಪೊಲೀಸ್ ಅಧೀಕ್ಷಕರು/ ಉಪ ಪೊಲೀಸ್ ಆಯುಕ್ತರು ಕರ್ನಾಟಕ ಪೊಲೀಸ್ ಮ್ಯಾನ್ಯುಯಲ್ ಭಾಗ-2, ಆದೇಶ ಸಂಖ್ಯೆ:1057ರಲ್ಲಿನ ಈ ಕೆಳಕಂಡ ಮಾನದಂಡಗಳ ಮೇರೆಗೆ ಆದೇಶ ಹೊರಡಿಸುತ್ತಾರೆ.<br>➢ ಹತ್ತು ವರ್ಷಗಳಿಂದ ಯಾವುದೇ ಅಪರಾಧ ಮತ್ತು ರೌಡಿ ಚಟುವಟಿಕೆಗಳಲ್ಲಿ ತೊಡಗದೇ ಇರುವವರು.<br>➢ ಯಾವುದೇ ಪ್ರಕರಣಗಳಲ್ಲಿ ಶಿಕ್ಷೆ ಆಗದೇ ಇರುವಂತಹವರು.<br>➢ ಪ್ರಸ್ತುತ. ನ್ಯಾಯಾಲಯಗಳಲ್ಲಿ ಸದರಿ ರೌಡಿಗಳ ವಿರುದ್ಧ ಯಾವುದೇ ಪ್ರಕರಣಗಳು ವಿಚಾರಣಾ ಹಂತದಲ್ಲಿ ಇರದೇ ಇರುವಂತಹವರು.<br>➢ 60 ವರ್ಷ ವಯಸ್ಸಿನ ಮೇಲ್ಪಟ್ಟಿರುವವರು.<br>➢ ದೀರ್ಘ ಕಾಲದಿಂದ ಅನಾರೋಗ್ಯದಿಂದ ಬಳಲುತ್ತಿರುವವರು.<br>➢ ಸದ್ವರ್ತನೆಯಿಂದಿರುವ ಹಾಗೂ ಸನ್ನಡತೆಯುಳ್ಳ ಆಸಾಮಿಗಳನ್ನು ರೌಡಿ ಪಟ್ಟಿಯಿಂದ ಕೈಬಿಡಬಹುದು. |

ಹೆಚ್‌ಡಿ 679 ಎಸ್‌ಎಸ್‌ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು